# ಯುವಸ್ಪಂದನ

## ನಮ್ಮ ಪ್ರಶ್ನೆಗಳಿಗೆ ನಿಮ್ಮ ಉತ್ತರ


**ವಿದ್ಯಾರ್ಥಿಗಳು ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಕರಿಸಬೇಕೇ? ಅಥವಾ ಭಾರತೀಯ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಬೇಕೇ?**

ಒಂದು ಸಂಸ್ಕೃತಿಯೆಂದರೆ ಜೀವನ ಶೈಲಿ, ಆಹಾರ ನಿಯಮಗಳು, ಉಡುಗೆ-ತೊಡುಗೆಗಳು, ಮದುವೆ ಪದ್ಧತಿ, ಸಂಪ್ರದಾಯಗಳು, ಆಚಾರ-ವಿಚಾರಗಳು ಇವೆಲ್ಲವೂ ಸೇರುತ್ತವೆ. ವಿವೇಕಾನಂದರು ಒಮ್ಮೆ ಹೀಗೆ ಹೇಳುತ್ತಾರೆ : "ತನ್ನ ಸಂಸ್ಕೃತಿಗೆ ದ್ರೋಹ ಬಗೆದು ಮತ್ತೊಂದು ಸಂಸ್ಕೃತಿಯನ್ನನುಸರಿಸಬಯಸುವ ಮಾನವ ತನ್ನ ಆತ್ಮ ಹತ್ಯೆಯನ್ನು ಮಾಡಿಕೊಂಡಂತೆ." ಇದರರ್ಥ ತನ್ನ ಸಂಸ್ಕೃತಿಯಲ್ಲಿ ರುವ ಎಲ್ಲ ವಿಷಯಗಳನ್ನೂ ಒಪ್ಪಿಕೊಂಡು ಅದರ ಕೊರತೆ, ತೊಂದರೆ, ಮೂಢಾಚಾರಗಳನ್ನು ಪ್ರೋತ್ಸಾಹಿಸಿಕೊಂಡು ಮುಂದು ವರಿಯಬೇಕೆಂದಲ್ಲ. ಬದಲಾಗಿ ತನ್ನ ಸಂಸ್ಕೃತಿಯಲ್ಲಿರುವ ಕೊರತೆ ಗಳನ್ನು ನೀಗಿಸಿ ಆ ಸಂಸ್ಕೃತಿಯನ್ನು ಮಾದರಿ ಸಂಸ್ಕೃತಿಯನ್ನಾಗಿ ಮಾಡಬೇಕು.

ಈಗ ವಿದ್ಯಾರ್ಥಿ ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಸರಿಸ ಬೇಕೇ—ಎಂದಾಗ ಭಾರತೀಯ ಸಂಸ್ಕೃತಿಯಲ್ಲಿಲ್ಲದ ಅತ್ಯಂತ ಉತ್ತಮ ಗುಣಗಳು ಅದರಲ್ಲೇನಿವೆ ಎಂಬುದನ್ನು ವಿಶ್ಲೇಷಿಸ ಬೇಕಾಗುತ್ತದೆ. ವಿದ್ಯಾರ್ಥಿ ಸುಸಂಸ್ಕೃತನಾಗಬೇಕೆಂದರೆ ಪಾಶ್ಚಾತ್ಯ ಸಂಸ್ಕೃತಿಯಲ್ಲಿರುವ ಎಲ್ಲಾ ಉತ್ತಮ ಅಂಶಗಳನ್ನಳವಡಿಸಿಕೊಂಡು ಆ ಸಂಸ್ಕೃತಿಯಲ್ಲಿರುವ ಕುಂದುಕೊರತೆಗಳನ್ನು ಕಡೆಗಣಿಸಬೇಕು. ಇದಕ್ಕೆ ಭಾರತೀಯ ಸಂಸ್ಕೃತಿಯೇನೂ ಅಡಚಣೆಯನ್ನು ಉಂಟು ಮಾಡದೆ ಇರುವುದರಿಂದ ವಿದ್ಯಾರ್ಥಿಗಳು ಭಾರತೀಯ ಸಂಸ್ಕೃತಿ ಯನ್ನೇ ಅಳವಡಿಸಿಕೊಳ್ಳಬೇಕು. ಅದು ಬಿಟ್ಟು ಕಣ್ಣು ಮುಚ್ಚಿ ಪಾಶ್ಚಾತ್ಯ ಸಂಸ್ಕೃತಿಯನ್ನು ಅದು ಸುಂದರವಾಗಿದೆ ಎಂದುಕೊಂಡು ಕುರುಡಾಗಿ ಅನುಸರಿಸುವುದಲ್ಲ

**—ಸಿರಿದೇವಿ ಹೆಚ್. ಎಸ್., ಅಂತಿಮ ಬಿ.ಎಸ್ಸಿ., ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.**

ಒಂದು ಪ್ರದೇಶದ ವಾತಾವರಣ, ಜನರ ಮನಸ್ಥಿತಿ, ಜೀವನ ಕ್ರಮ ಇವೆಲ್ಲದರ ಪ್ರಭಾವದಿಂದ ಒಂದು ಸಂಸ್ಕೃತಿಯು ಅರಳುತ್ತದೆ. ಈ ಸಂಸ್ಕೃತಿ ಬೇರೆಡೆಗೂ, ಬೇರೆ ಸಂಸ್ಕೃತಿ ಇಲ್ಲಿಗೂ ಹೊಂದು ವುದಿಲ್ಲ. ಕಬ್ಬಿಣವನ್ನು ಕಾಯಿಸಿದರೆ ಅದು ಮೆದುವಾಗುತ್ತದೆ, ಬಾಗಿಸಿದಂತೆ ಬಾಗುತ್ತದೆ. ಆರಿದ ನಂತರ ಗಟ್ಟಿಯಾಗುತ್ತದೆ. ಆದರೆ ಮಣ್ಣು ಹಾಗಲ್ಲ. ಅದು ಹಸಿಯಾಗಿದ್ದಾಗ ಬೇಕಾದ ಆಕಾರ ನೀಡ ಬಹುದು. ಒಮ್ಮೆ ಸುಟ್ಟರೆ ಮುಗಿಯಿತು, ಗಟ್ಟಿಯಾಗಿಬಿಡುತ್ತದೆ. ನಂತರ ಬಲವಂತವಾಗಿ ಆಕಾರ ಬದಲಿಸಲು ಹೊರಟರೆ ಮುರಿದು ಬೀಳುತ್ತದೆ.




ನಮ್ಮ ಸಂಸ್ಕೃತಿ ಧರ್ಮದ ತಳಹದಿಯ ಮೇಲೆ ನಿಂತಿದೆ. ವಿವೇಕಾನಂದರು ಹೇಳುವಂತೆ ನಾವು ಧಾರ್ಮಿಕವಾಗಿ ಹುಟ್ಟುತ್ತೇವೆ, ಬೆಳೆಯುತ್ತೇವೆ, ಕರ್ತವ್ಯಮಾಡುತ್ತೇವೆ, ಕಡೆಗೆ ಧಾರ್ಮಿಕವಾಗಿಯೇ ಸಾಯುತ್ತೇವೆ. ಹೀಗೆ ಧರ್ಮದ ತಳಹದಿಯ ಸಂಸ್ಕೃತಿಯ ಮಕ್ಕಳಾದ ನಾವು ಇಹಲೋಕದ ಸುಖವೋ ಅಥವಾ ಇನ್ನಾವುದೋ ತಳಹದಿಯ ಮೇಲೆ ನಿಂತಿರುವ ಸಂಸ್ಕೃತಿಯನ್ನು ಅನುಕರಿಸಲು ಹೊರಟರೆ ಅದರಿಂದ ಬರೇ ನಿರಾಸೆಯನ್ನು ಹೊಂದುತ್ತೇವೆ.

ನಮ್ಮ ದೇಶದ ಹವಾಗುಣಕ್ಕೆ ನಮ್ಮ ವೇಷಭೂಷಣಗಳು, ನಮ್ಮ ಪರಿಸರಕ್ಕೆ ನಮ್ಮ ಧಾರ್ಮಿಕ ಭಾವನೆಗಳು ಪೂರಕವಾಗಿವೆ. ಅವನ್ನು ಸ್ವೀಕರಿಸೋಣ, ಮೈಗೂಡಿಸಿಕೊಳ್ಳೋಣ. ಏಕೆಂದರೆ ನಮ್ಮ ರೀತಿ ನೀತಿಗಳು ಮಾತ್ರ ನಮಗೆ ಮೈಗೂಡುತ್ತವೆ. ಇತರರ ರೀತಿ ನೀತಿಗಳು ನಮಗೆ ಮೈಗೂಡುವುದಿಲ್ಲ. ಬರೀ ಅಂಧಾನುಕರಣೆ ಸಾಧ್ಯ. ಅಂಧಾನುಕರಣೆಯ ಫಲ ಬರೇ ಸ್ವಂತಿಕೆಯ ನಾಶ. ಮತ್ತಿನ್ನೇನೂ ಅಲ್ಲ. ಇತರರ ಸಂಸ್ಕೃತಿಯಲ್ಲಿ ಕಂಡುಬರುವ ಒಳ್ಳೆಯ ಅಂಶಗಳನ್ನು ನಮ್ಮದಾಗಿಸಿಕೊಂಡು, ನಮ್ಮದೇ ರೀತಿಯಲ್ಲಿ ಅಳವಡಿಸಿ ಕೊಳ್ಳೋಣ. ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆ ಖಂಡಿತ ಸಲ್ಲ.

**— ವಿಶ್ವನಾಥ. ಎ., ಕಾನೂನು ವಿದ್ಯಾರ್ಥಿ, ಮೈಸೂರು.**

ಪ್ರಸ್ತುತ ಸಮಾಜದಲ್ಲಿ ವಿದ್ಯಾರ್ಥಿಗಳು ಭಾರತೀಯ ಸಂಸ್ಕೃತಿ ಯನ್ನು ಮರೆತು ಪಾಶ್ಚಾತ್ಯ ಸಂಸ್ಕೃತಿಯ ಕಡೆಗೆ ಮಾರುಹೋಗು ತ್ತಿದ್ದಾರೆ. ಇದರಿಂದಾಗಿ ನಮ್ಮ ದೇಶದ ಸಂಸ್ಕೃತಿಯು ಅಳಿಯುವ ಸ್ಥಿತಿಗೆ ಬಂದಿದೆ. "ಇತರ ಧರ್ಮವನ್ನು ಪ್ರೀತಿಸು, ನಿನ್ನ ಧರ್ಮದಲ್ಲಿ ಜೀವಿಸು" ಎಂದು ಗಾಂಧೀಜಿಯವರು ಹೇಳಿರುವಂತೆ ನಮ್ಮ ದೇಶದ ಯುವಜನಾಂಗ ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಮೈಗೂಡಿಸಿಕೊಂಡು ನಂತರ ಇತರ ಸಂಸ್ಕೃತಿಗಳನ್ನು ಪ್ರೀತಿಸಬೇಕು. ಆದರೆ ಇಂದಿನ ವಿದ್ಯಾರ್ಥಿಗಳು ಪಾಶ್ಚಾತ್ಯ ಸಂಸ್ಕೃತಿಯಲ್ಲಿರುವ ಕೆಲವೇ ಅಂಶಗಳನ್ನು ಅಳವಡಿಸಿಕೊಂಡು ಅವುಗಳಲ್ಲಿರುವ ಉತ್ತಮ ಅಂಶಗಳನ್ನು ಬಿಟ್ಟುಬಿಡುತ್ತಾರೆ. ಮಹಾತ್ಮರು ಹೇಳುವಂತೆ "ಒಳ್ಳೆಯ ಅಂಶಗಳು ಯಾವುದೇ ದೇಶ ಅಥವಾ ಸಂಸ್ಕೃತಿಯಲ್ಲಿರಲಿ ಅವನ್ನು ನಾವು ಅಳವಡಿಸಿಕೊಳ್ಳಬೇಕು" ಎಂಬ ಅಂಶಗಳನ್ನು ವಿದ್ಯಾರ್ಥಿಗಳು ಮರೆತಿದ್ದಾರೆ.

**—ಎಂ.ಜಿ. ರೇಣುಕ, ದ್ವಿತೀಯ ಬಿ.ಎ. ಜೆ.ಎಸ್.ಎಸ್. ಮಹಿಳಾ ಕಾಲೇಜು, ಮೈಸೂರು**

ವಿದ್ಯಾರ್ಥಿಗಳು ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಕರಿಸುವುದಕ್ಕಿಂತ ನಮ್ಮ ಭಾರತೀಯ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಬೇಕು. ನಮ್ಮ ಮನೆಯ ಶುದ್ಧವಾದ, ಪವಿತ್ರವಾದ ನೀರನ್ನು ಬಿಟ್ಟು, ಪಕ್ಕದ ಮನೆಯ ಕೃತಕ ರುಚಿಯ ಪಾನೀಯಕ್ಕೆ ಆಸೆಪಡುವುದು ಸರಿಯಲ್ಲ. ವಿದ್ಯಾರ್ಥಿಗಳಾದ ನಾವು ನಮ್ಮ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳುವುದೇ ಸೂಕ್ತ. ನಮ್ಮ ಪೂರ್ವಿಕರು, ಸಾಧು-ಸಂತರು, ಮಹಾನ್ ಆದರ್ಶ ವ್ಯಕ್ತಿಗಳು ನಮಗೆ ಸನ್ಮಾರ್ಗದ ದಾರಿ ತೋರಿದ್ದಾರೆ, ನಮ್ಮ ಜೀವನದ ಗುರಿಗಳನ್ನು, ನಮ್ಮ ಸಂಸ್ಕೃತಿಯ ಮೌಲ್ಯಗಳನ್ನು ತಿಳಿಸಿದ್ದಾರೆ. ನ್ಯಾಯ-ಅನ್ಯಾಯ, ಧರ್ಮ-ಅಧರ್ಮ, ಯಾವುದು ಸರಿ, ಯಾವುದು ತಪ್ಪು ಹೀಗೆ ಹಲವಾರು ರೀತಿಯಲ್ಲಿ ನಮಗೆ ಮಾರ್ಗದರ್ಶನ ತೋರಿರುವ ನಮ್ಮ ಸಂಸ್ಕೃತಿಯನ್ನು ಬಿಟ್ಟು ಪಾಶ್ಚಾತ್ಯರ ಸಂಸ್ಕೃತಿಯನ್ನು ಅನುಕರಿಸುವುದು ಎಷ್ಟು ಸರಿ? ನಮ್ಮ ದೇಶದಲ್ಲಿ ದೈವೀಶಕ್ತಿಯಿದೆ. ಅವತಾರ ಪುರುಷರು ನಾವು ತಪ್ಪು ಮಾಡಿದಾಗ ನಮ್ಮನ್ನು ತಿದ್ದಿ ಸರಿದಾರಿಗೊಯ್ಯುತ್ತಾರೆ. ನಮ್ಮ ದೇಶದಲ್ಲಿ ಹುಟ್ಟಿರುವುದಕ್ಕೆ ನಾವು ಹೆಮ್ಮೆ ಪಡಬೇಕು. ನಮ್ಮ ಸಂಸ್ಕೃತಿಯನ್ನು ಉಳಿಸಬೇಕು, ಬೆಳೆಸಬೇಕು, ಪ್ರೀತಿಸಬೇಕು.

**ಕೆಟ್ಟದ್ದನ್ನು ಅನುಕರಿಸುವವನು ಆ ಕೆಟ್ಟದ್ದು ಯಾರದೂ ಅವನನ್ನು ಮೀರಿಹೋಗುತ್ತಾನೆ. ಆದರೆ ಯಾರದಾದರೂ ಒಳ್ಳೆಯದನ್ನು ಅನುಕರಿಸುವವನು ಅವನ ಹಿಂದೆಯೆ ಉಳಿಯುತ್ತಾನೆ.** —*Guicciardini*

ಪಾಶ್ಚಾತ್ಯಸಂಸ್ಕೃತಿಯನ್ನು ದ್ವೇಷಿಸಬೇಕು ಎಂದಲ್ಲ. ಅವರಲ್ಲಿರುವ ಒಳ್ಳೆಯ ಮೌಲ್ಯಗಳನ್ನು ತಿಳಿದುಕೊಳ್ಳಬೇಕು. ನಮ್ಮ ಋಷಿ-ಮುನಿಗಳು ಮಾಡಿರುವ ಸಾಧನೆಗಳು, ಆಚಾರ-ವಿಚಾರಗಳು, ಎಲ್ಲವನ್ನೂ ಒಂದಲ್ಲಾ ಒಂದು ರೀತಿಯಲ್ಲಿ ವೈಜ್ಞಾನಿಕವಾಗಿಯೇ ಮಾಡಿದ್ದಾರೆ. ಅದನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಮೂಢನಂಬಿಕೆಗಳು ಮುಂತಾದ ಹಲವಾರು ಆಚರಣೆಗಳು ಹುಟ್ಟಿಕೊಂಡಿರುವುದರಿಂದ ನಮ್ಮ ನಿಜವಾದ ಸಂಸ್ಕೃತಿಯ ಮೌಲ್ಯಗಳು ಕಣ್ಮರೆಯಾಗಿವೆ. ಆದರೆ ನಾವು ನಮ್ಮ ಸಂಸ್ಕೃತಿಯ ನಿಜವಾದ ಸಾರವನ್ನು ಸರಿಯಾಗಿ ತಿಳಿದುಕೊಳ್ಳಲು ಪ್ರಯತ್ನಿಸಿದರೆ ನಮಗೆ ವೈಜ್ಞಾನಿಕವಾಗಿ, ಬೌದ್ಧಿಕವಾಗಿ, ಆಧ್ಯಾತ್ಮಿಕವಾಗಿ ಎಲ್ಲದರಲ್ಲೂ ಮುಂದುವರೆಯಲು ಬೇಕಾದ ಹಲವು ಬಗೆಯ ಮಾರ್ಗದರ್ಶನ ಸಿಗುತ್ತದೆ. ಪಾಶ್ಚಾತ್ಯರ ವೈಜ್ಞಾನಿಕತೆ, ತಾಂತ್ರಿಕತೆ, ಕಂಪ್ಯೂಟರೀಕರಣ, ಐಷಾರಾಮ ಜೀವನ ಇದಕ್ಕೆ ನಾವು ಮಾರುಹೋಗಿ ಅವರನ್ನು ಅನುಕರಿಸಲು ಪ್ರಯತ್ನಿಸುತ್ತೇವೆ. ಆದರೆ ಅವರು ಅವುಗಳಿಂದ ಹೊರಬಂದು ಆಧ್ಯಾತ್ಮಿಕ ಜೀವನವನ್ನು ಅನುಕರಿಸಲು ಪ್ರಯತ್ನಿಸುತ್ತಾರೆ. ಆದ್ದರಿಂದ ನಾವು ನಮ್ಮ ಸಂಸ್ಕೃತಿಯನ್ನು ಅನುಕರಿಸಬೇಕು, ಪೋಷಿಸಬೇಕು, ಪ್ರೀತಿಸಬೇಕು ಹಾಗೂ ಮೈಗೂಡಿಸಿಕೊಳ್ಳಬೇಕು. —ಪಲ್ಲವಿ. ಎಸ್., ದ್ವಿತೀಯ ಬಿ.ಎ., ಜೆ.ಎಸ್.ಎಸ್. ಮಹಿಳಾ ಕಾಲೇಜು, ಮೈಸೂರು.

ಪ್ರತಿ ನಾಣ್ಯಕ್ಕೂ ಎರಡು ಮುಖವಿರುತ್ತದೆ. ಹಾಗೆ ಪ್ರತಿ ಸಂಸ್ಕೃತಿಗೂ ಅದರದೆ ಆದ ಎರಡು ಮುಖಗಳು ಇವೆ. ಕೇವಲ ಒಂದು ಮುಖವನ್ನು ನೋಡಿ ಅದರ ಅನುಕರಣೆ ಅಥವಾ ಕೇವಲ ಇನ್ನೊಂದು ಮುಖ ನೋಡಿ ಸಾರಾಸಗಟಾಗಿ ತಿರಸ್ಕರಿಸುವುದು ಎರಡೂ ಸಲ್ಲದು. ನಮ್ಮ ಋಗ್ವೇದ ಹೇಳುವಂತೆ ನಿಜವಾದ ಜ್ಞಾನ ನಮಗೆ ಎಲ್ಲಾ ದಿಕ್ಕಿನಿಂದ ಬರಲಿ. ವಿದ್ಯಾರ್ಥಿಗಳಾದ ನಾವು ಎರಡೂ ಸಂಸ್ಕೃತಿಯ ಒಳ್ಳೆಯ ಅಂಶಗಳನ್ನು ಅಳವಡಿಸಿಕೊಂಡು ನಮ್ಮ ವ್ಯಕ್ತಿತ್ವವನ್ನು ಹೆಮ್ಮರದಂತೆ ಬೆಳೆಸಿಕೊಳ್ಳಬೇಕು.

ಪಾಶ್ಚಾತ್ಯ ಸಂಸ್ಕೃತಿಯಲ್ಲಿರುವ ಸಮಯ ಪರಿಪಾಲನೆ, ಶುಚಿತ್ವ, ಛಲ, ಮುನ್ನುಗ್ಗುವ ಆಸೆ, ಆಕಾಶ ಮುಟ್ಟುವ ತವಕ ನಮ್ಮಲ್ಲಿ ರೂಢಿಸಿಕೊಳ್ಳಬೇಕು. ಹಾಗೆ ಭಾರತೀಯ ಸಂಸ್ಕೃತಿಯಲ್ಲಿರುವ ಆಧ್ಯಾತ್ಮಿಕತೆ, ಗುರುಹಿರಿಯರಲ್ಲಿ ಭಕ್ತಿಭಾವ, ಸ್ವಾಭಿಮಾನ, ಶಿಷ್ಟಾಚಾರಗಳನ್ನು ಉಳಿಸಿಕೊಳ್ಳಬೇಕು. ಪಾಶ್ಚಾತ್ಯ ಸಂಸ್ಕೃತಿ ಎಂದರೆ ಕೇವಲ ಸ್ವಚ್ಛಂದಪ್ರವೃತ್ತಿ ಅಲ್ಲ ಅಥವಾ ಮುಕ್ತ ಲೈಂಗಿಕತೆಯೂ ಅಲ್ಲ. ಕೇವಲ ಇವುಗಳನ್ನೇ ಪಾಶ್ಚಾತ್ಯ ಸಂಸ್ಕೃತಿ ಎಂದು ತಿಳಿದಿರುವವನು ಮೂರ್ಖ ಹಾಗೂ ಇವುಗಳನ್ನು ಮಾತ್ರ ಅಳವಡಿಸಿಕೊಳ್ಳುವವನು ಶತಶತ ಮೂರ್ಖ.

ಹಾಗೆಯೇ ಪಾಶ್ಚಾತ್ಯ ಸಂಸ್ಕೃತಿಯನ್ನು ಸಂಪೂರ್ಣ ತಿರಸ್ಕರಿಸಿರುವವನು ಸಹ ಶತ ಮೂರ್ಖ. ಪ್ರತಿಯೊಂದು ಸಂಸ್ಕೃತಿಯಲ್ಲಿ ಅದರದೇ ಆದ ಮೇಲು ಕೀಳುಗಳಿವೆ. ಯುವಕರು ಕೇವಲ ಪಾಶ್ಚಾತ್ಯ ಅಥವಾ ಭಾರತೀಯ ಸಂಸ್ಕೃತಿಯನ್ನಲ್ಲದೆ, ಜಗತ್ತಿನ ಎಲ್ಲಾ ಸಂಸ್ಕೃತಿಯಲ್ಲಿರುವ ಉತ್ತಮ ಅಂಶಗಳನ್ನು ರೂಢಿಸಿಕೊಂಡು ಬೆಳೆಯಬೇಕು. —ಅಜಯ್. ಬಿ., ಕುವೆಂಪು ನಗರ, ಮೈಸೂರು.

ಕ್ಷುದ್ರ ಮನಸ್ಸಿನ ಅತಿಮುಖ್ಯ ಲಕ್ಷಣ ಯಾವುದೆಂದರೆ ಗುಲಾಮನಂತೆ ಇತರರನ್ನು ಅನುಕರಿಸುವುದು.

—Greville

ಭಾರತೀಯ ಸಂಸ್ಕೃತಿ ಸನಾತನವಾದುದು ಮತ್ತು ಪ್ರಾಚೀನವಾದುದು. ಈ ಸಂಸ್ಕೃತಿ ವೇದಗಳ ಕಾಲಕ್ಕಿಂತ ಹಿಂದೆಯೇ ಇತ್ತೆಂದು ತಿಳಿದು ಬರುತ್ತದೆ. ಉಳಿದ ಸಂಸ್ಕೃತಿಗಳು ನಿಸರ್ಗದಲ್ಲಿನ ನಿಯಮದಂತೆ ಹುಟ್ಟಿ ಬೆಳೆದಿವೆ. ನಮ್ಮ ಸಂಸ್ಕೃತಿ ಒಬ್ಬ ವ್ಯಕ್ತಿ ಅಥವಾ ಒಂದು ಪವಿತ್ರ ಗ್ರಂಥದ ಮೇಲೆ ನಿಂತಿಲ್ಲ. "ಇದು ಒಂದು ಜೀವಂತ ಸಂಸ್ಕೃತಿ." ಗತಿಶೀಲತೆ ಒಂದು ಸಂಸ್ಕೃತಿಯ ಜೀವಂತಿಕೆ. ಹಿಂದೂ ಸಂಸ್ಕೃತಿ ೨೦ನೇ ಶತಮಾನದಲ್ಲಿಯೂ "ಶ್ರೀಮಂತ ಸಂಸ್ಕೃತಿ"ಯೆಂದು ತೋರಿಸಿಕೊಟ್ಟಿದೆ. ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಲಲಿತ ಕಲೆಗಳು, ದ್ವೈತ-ಅದ್ವೈತ ಮೊದಲಾದ ತತ್ತ್ವಗಳು, ಆಧ್ಯಾತ್ಮಿಕ ಸಂಪತ್ತು– ಈ ಎಲ್ಲವನ್ನೂ ನಮ್ಮ ಸಂಸ್ಕೃತಿಯಲ್ಲಿ ಕಾಣಬಹುದು. "ವೈವಿಧ್ಯತೆಯಲ್ಲಿ ಏಕತೆ" ಇದು ನಮ್ಮ ಸಂಸ್ಕೃತಿಯ ಒಂದಂಶವಾಗಿದೆ. ಎಲ್ಲಾ ಧರ್ಮೀಯರು ಒಂದೆಡೆ ಸಹಬಾಳ್ವೆ ನಡೆಸಲು ಸಹಕಾರಿಯಾಗಿದೆ.

ಭಾರತೀಯ ಸಂಸ್ಕೃತಿಯು ಧಾರ್ಮಿಕತೆಗೆ ಮತ್ತು ಆಧ್ಯಾತ್ಮಿಕತೆಗೆ ಹೆಚ್ಚು ಒತ್ತು ಕೊಟ್ಟಿದೆ. ವೈದಿಕ ಕಾಲದಲ್ಲಿ ಭಾರತೀಯರು ಬೃಹತ್ ಕಟ್ಟಡನಿರ್ಮಾಣಕ್ಕೆ ಮಹತ್ವ ಕೊಡಲಿಲ್ಲ. ಬದಲಾಗಿ ಆಧ್ಯಾತ್ಮಿಕತೆಗೆ ಪ್ರಾಶಸ್ತ್ಯ ನೀಡಿದರು. ವರ್ಣಾಶ್ರಮ ಧರ್ಮ ಮತ್ತು ಪುರುಷಾ

**ಜೇನ್ನೊಣವು ಎಲ್ಲ ಹೂವುಗಳಿಂದ ಮಕರಂದವನ್ನು ಹೀರಿಕೊಂಡು ತನ್ನದೇ ಆದ ಜೇನುತುಪ್ಪವನ್ನು ತಯಾರಿಸುವಂತೆ ಎಲ್ಲ ಸಂಸ್ಕೃತಿಯಿಂದಲೂ ಒಳಿತನ್ನು ಹೀರಿಕೊಂಡು ನಮ್ಮದೇ ವ್ಯಕ್ತಿತ್ವವನ್ನು ಬೆಳಸಿಕೊಳ್ಳಬೇಕು.**

ರ್ಥಗಳು ಭಾರತೀಯರಿಗೆ ಅಪೂರ್ವ ಜೀವನಾದರ್ಶಗಳಾಗಿವೆ. ನಮ್ಮ ಸಂಸ್ಕಾರಗಳು ಪ್ರತಿಯೊಬ್ಬರನ್ನು ಸರಿಯಾದ ರೀತಿ ಸಾಮಾಜೀಕರಿಸುತ್ತವೆ. ಪ್ರಾಚೀನ ಭಾರತದಲ್ಲಿ ಮಹಿಳೆಯರಿಗೆ ಸಮಾನ ಅಂತಸ್ತು ನೀಡಿದ್ದರು.

ಒಟ್ಟಾರೆ ಮನಸ್ಸಿಗೆ ನೆಮ್ಮದಿ ಮತ್ತು ಶಾಂತಿಯನ್ನು ನೀಡುವುದು ನಮ್ಮ ಸಂಸ್ಕೃತಿ. ಆದ್ದರಿಂದ ವಿದ್ಯಾರ್ಥಿಗಳೆಲ್ಲರೂ ಭಾರತೀಯ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಬೇಕು.

**— ರಾಜೇಶ್. ಬಿ.ಸಿ., ಪ್ರಥಮ ಎಲ್.ಎಲ್.ಬಿ.**
**ವಿದ್ಯಾವರ್ಧಕ ಕಾನೂನು ಕಾಲೇಜು, ಮೈಸೂರು.**

ವಿದ್ಯಾರ್ಥಿಗಳು ಯಾವ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಬೇಕು ಎನ್ನುವುದಕ್ಕಿಂತ ಎಂತಹ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಬೇಕು ಎನ್ನುವುದು ಮುಖ್ಯ. ಭಾರತೀಯ ಸಂಸ್ಕೃತಿಯಲ್ಲಿ ಒಳ್ಳೆಯ ವಿಷಯಗಳಿವೆ. ಅದೇ ರೀತಿಯಲ್ಲಿ ಪಾಶ್ಚಾತ್ಯ ಸಂಸ್ಕೃತಿಯಲ್ಲೂ ಕೆಲವು ಒಳ್ಳೆಯ ವಿಷಯಗಳಿರಬಹುದು. ವಿದ್ಯಾರ್ಥಿ ತನ್ನ ಬುದ್ಧಿ ಉಪಯೋಗಿಸಿ, ಪುಸ್ತಕಗಳನ್ನು ಓದಿ, ಅನುಭವಗಳನ್ನು ಕೇಳಿ, ಒಳ್ಳೆಯ ವಿಷಯಗಳನ್ನು ತಿಳಿದಿರುವ ಗುರುಹಿರಿಯರನ್ನು ನೋಡಿ, ಕೇಳಿ, ಒಳ್ಳೆಯ ಸಂಸ್ಕೃತಿಗಳನ್ನು ಬೆಳೆಸಿಕೊಳ್ಳಬೇಕು. ಕೆಲವು ಬಾರಿ ಆದರ್ಶ ವ್ಯಕ್ತಿಗಳನ್ನು ನೋಡಿ ಕೂಡ ಸಂಸ್ಕೃತಿ ಬೆಳೆಸಿಕೊಳ್ಳಬೇಕು.

ಈ ನಿಟ್ಟಿನಲ್ಲಿ ನೋಡಿದಾಗ ಭಾರತೀಯ ಸಂಸ್ಕೃತಿಯಲ್ಲಿ ಭಾರತೀಯನಿಗೆ ಸರಿಹೋಗುವಂತಹ ಅನೇಕ ಅಂಶಗಳಿವೆ. ಅದೇ ರೀತಿ ಪಾಶ್ಚಾತ್ಯರಿಗೆ ಅವರ ಸಂಸ್ಕೃತಿ ಸರಿಹೋಗಿರಬಹುದು. ಅದರಲ್ಲಿ ಕೆಲವು ಅಂಶಗಳು ಭಾರತೀಯ ಸಂಸ್ಕೃತಿಗಿಂತ ಮಿಗಿಲಾಗಿವೆ. ಒಟ್ಟಿನಲ್ಲಿ ವಿದ್ಯಾರ್ಥಿ ತನ್ನ ವ್ಯಕ್ತಿತ್ವಕ್ಕೆ ಕುಂದು ಬಾರದಹಾಗೆ, ಅದನ್ನು ಪೋಷಿಸಿ ಬೆಳೆಸುವಂತಹ, ಅವನ ಹೆತ್ತ ತಂದೆತಾಯಿಗಳಿಗೆ ಒಳ್ಳೆ ಹೆಸರು ಬರಿಸುವಂತಹ, ತನ್ನ ರಾಷ್ಟ್ರದ ಮೆಚ್ಚುಗೆಯನ್ನು ಪಡೆಯುವಂತಹ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಬೇಕು.

**— ಮಂಜುನಾಥ. ಎನ್. ಎಂ. ಎಲ್. , ಎಂ.ಬಿ.ಬಿ.ಎಸ್.**
**ಜೆ.ಎಸ್.ಎಸ್. ಮೆಡಿಕಲ್ ಕಾಲೇಜು, ಮೈಸೂರು.**

ವಿದ್ಯಾರ್ಥಿಗಳ ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆ ಸಲ್ಲದು, ಅನುಸರಿಸಬಾರದು. ಅನುಕರಣೆಯಿಂದ ಆಗುವುದಾದರೂ ಏನು? ಅದು ನಮ್ಮನ್ನು "ಅವರನ್ನಾಗಿಸುತ್ತದೆ". ಆಗ ನಮ್ಮ ಅಸ್ತಿತ್ವವಾದರೂ ಎಲ್ಲಿ? ಅವಶ್ಯಕತೆ ಏನಾದರೂ ಇದೆಯೇ? ಖಂಡಿತ ಇಲ್ಲ. ಇದು ನಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದಕ್ಕೆ ತೊಡಕುಂಟಾಗುತ್ತದೆ. ಇಂಥ "ಯಾಂತ್ರಿಕ ವ್ಯಕ್ತಿತ್ವ" ಇದ್ದೂ ಸತ್ತಂತೆ. ಇದು ನೈಜ ವ್ಯಕ್ತಿತ್ವದ ಬೆಳವಣಿಗೆಯಲ್ಲ, ಕೃತಕ ವ್ಯಕ್ತಿತ್ವದ ಬೆಳವಣಿಗೆ. ಇದರ ಅರ್ಥ ಅದರಿಂದ ಏನೂ ಕಲಿಯದೇ ಇರುವುದು ಎಂದಲ್ಲ. "ಕಲಿಕೆ"— ಇದು ನಮ್ಮ ಜೀವನ ಪರ್ಯಂತ ನಡೆಯುವ ಪ್ರವೃತ್ತಿ. ಇದು ಅನುಕರಣೆಯಾಗಲಾರದು. ಇವೆರಡರ ನಡುವಿನ ವ್ಯತ್ಯಾಸ ಅಪಾರವಾದುದು. ಕಲಿತದ್ದನ್ನು ನಾವು ಒರೆಗಲ್ಲಿಗೆ ಹಚ್ಚಿ ನಮ್ಮದೇ ಆದ ರೀತಿಯಲ್ಲಿ ಬಳಸಿದಾಗ ಅದು ಸ್ವಪ್ರಯತ್ನವಾಗುತ್ತದೆ. ಆದರೆ ಇಂದು ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋಗಿರುವ ವಿದ್ಯಾರ್ಥಿಗಳು "ಸ್ವಂತಿಕೆ" ಕಳೆದುಕೊಂಡ "ಸಿನಿಕ"ರಾಗಿದ್ದಾರೆ. ಇದು ಅವರ ದುರಂತ, ದೌರ್ಬಲ್ಯ.

**—ಮಂಜುನಾಥ. ಕೆ. ತೃತೀಯ ಬಿ.ಎ.**
**ಮಹಾರಾಜಾ ಕಾಲೇಜು, ಮೈಸೂರು.**

ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಕರಿಸುವ ನೆಪದಲ್ಲಿ ನಮ್ಮ ವಿದ್ಯಾರ್ಥಿಗಳು, ಯುವಜನತೆ ದುಶ್ಚಟಗಳಿಗೆ ದಾಸರಾಗಿದ್ದಾರೆ. ತಮ್ಮ ಸುಂದರ ಭವಿಷ್ಯದ ಜೀವನವನ್ನು ಅನ್ಯಾಯವಾಗಿ ಹಾಳು ಮಾಡಿಕೊಳ್ಳುತ್ತಿದ್ದಾರೆ. ಈ ವಿಚಾರದಲ್ಲಿ ನಮ್ಮ ಧನಿಕ ವರ್ಗದ ಪೋಷಕ ಮಹಾಶಯರು ಬಹಳ ಮುಂದಿದ್ದಾರೆ. ಆಧುನಿಕತೆಯೆಂಬ ತಪ್ಪು ಕಲ್ಪನೆಯೊಂದಿಗೆ, ಅಂತಸ್ತು (*status*)ಗಳನ್ನು ಕಾಯ್ದುಕೊಳ್ಳಬೇಕೆಂಬ ಹುಚ್ಚು ಭ್ರಮೆಯಲ್ಲಿ ಪಾಶ್ಚಾತ್ಯ ಸಂಸ್ಕೃತಿಯೆಂಬ ಬಲೆಗೆ ಸಿಲುಕಿ ರಾಷ್ಟ್ರೀಯ ಸಾಂಸ್ಕೃತಿಕ ಹಿನ್ನೆಲೆಯಿಂದ ದೂರವಾಗುತ್ತಿದ್ದಾರೆ. ತನ್ಮೂಲಕ ತಮ್ಮ ಮಕ್ಕಳ ಭವಿಷ್ಯವನ್ನೂ ಹಾಳುಮಾಡುತ್ತಿದ್ದಾರೆ

**—ಬಸವರಾಜು.ಆರ್., ಪ್ರಥಮ ಬಿ.ಎಸ್ಸಿ.**
**ಜೆ.ಎಸ್.ಎಸ್.ಕಾಲೇಜು, ಮೈಸೂರು**

## ಆಶ್ರಮದ ವಿಶೇಷ ಕಾರ್ಯಕ್ರಮಗಳು

### ಜುಲೈ 2001

**5** ಗುರುವಾರ ಶ್ರೀ ಗುರು ಪೂರ್ಣಿಮಾ

*(ಬೆಳಗ್ಗೆ ೫.೩೦ರಿಂದ ಮಧ್ಯಾಹ್ನ ೧೨.೦೦ರವರೆಗೆ ಉಪಾಕೀರ್ತನೆ, ಭಜನೆ, ಪ್ರವಚನ, ಮುಂತಾದ ಕಾರ್ಯಕ್ರಮಗಳು ಇರುತ್ತವೆ.)*

**19** ಗುರುವಾರ ಸ್ವಾಮಿ ರಾಮಕೃಷ್ಣಾನಂದ ಜಯಂತಿ

ಪ್ರತಿ ಶನಿವಾರ ಇಂಗ್ಲೀಷಿನಲ್ಲಿ ಮತ್ತು ಭಾನುವಾರ ಕನ್ನಡದಲ್ಲಿ ಸಂಜೆ 6.00 ರಿಂದ 7.00 ರವರೆಗೆ ಆಧ್ಯಾತ್ಮಿಕ ಪ್ರವಚನಗಳು ನಡೆಯುತ್ತವೆ.

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ